ಕ.ವಿ.ಪ್ರ.ನಿ.ನಿ. ಮತ್ತು ವಿಸಕಂಗಳ ಪಿಂಚಣಿ ಮತ್ತು ಉಪದಾನ ಟ್ರಸ್ಟ್

KPTCL AND ESCOMs PENSION AND GRATUITY TRUSTS

Ph No. 080-22291150
Fax No. 080-22223558
E-mail: pgtrustkptcl@yahoo.com

6 ನೇ ಮಹಡಿ,
ಕಾವೇರಿ ಭವನ,
ಬೆಂಗಳೂರು-560 009.

ಸಂಖ್ಯೆ. ಕೆಇಪಿಜಿಟಿ/ಕೆಸಿಒ123/ಪಿ14/2015-16/ Cys-55     ದಿನಾಂಕ 14 JAN 2016

ಗೆ,

1. ವ್ಯವಸ್ಥಾಪಕ ನಿರ್ದೇಶಕರು,
   ಬೆವಿಕಂ/ಮವಿಕಂ/ಗುವಿಕಂ/ಹುವಿಕಂ/ಚಾವಿಸನಿ.
2. ಆರ್ಥಿಕ ಸಲಹೆಗಾರರು,
   ಬೆವಿಕಂ/ಮವಿಕಂ/ಗುವಿಕಂ/ಹುವಿಕಂ/ಚಾವಿಸನಿ.
3. ಪ್ರಧಾನ ವ್ಯವಸ್ಥಾಪಕರು (ಆ & ಮಾಸಂಅ)
   ಬೆವಿಕಂ/ಮವಿಕಂ/ಗುವಿಕಂ/ಹುವಿಕಂ/ಚಾವಿಸನಿ.

ಮಾನ್ಯರೇ,

ವಿಷಯ: **"Pay-as-you-go"** ವಿಧಾನ ಪ್ರಕಾರ ಸರ್ಕಾರ ಭರಿಸಬೇಕಾದ ಪಿಂಚಣಿ ಮತ್ತು ಉಪದಾನ ವಂತಿಗೆಯ ಬಾಕಿ ಬಿಡುಗಡೆ ಮಾಡುವ ಬಗ್ಗೆ.

ಉಲ್ಲೇಖ:
1. ಸರ್ಕಾರಿ ಅಧಿಸೂಚನೆ ಸಂಖ್ಯೆ ಡಿಇ 14 ಪಿಎಸ್‌ಆರ್ 2002 ದಿನಾಂಕ 31.05.2002
2. ಸರ್ಕಾರಿ ಆದೇಶ ಸಂಖ್ಯೆ. ಡಿಇ 15ಪಿಎಸ್‌ಆರ್ 2002 ದಿನಾಂಕ 19.12.2002.
3. ಈ ಕಛೇರಿ ಪತ್ರ ಸಂಖ್ಯೆ. ಕೆಇಪಿಜಿಟಿ/ಪಿ14/2015-16/736-37 ದಿನಾಂಕ 18.11.2015.
4. ಸರ್ಕಾರದ ಪತ್ರ ಸಂಖ್ಯೆ. ಇಎನ್ 9 ಪಿಎಸ್‌ಆರ್ 2015/ಪಿ3 ದಿನಾಂಕ 07.12.2015.
5. ಈ ಕಛೇರಿ ಪತ್ರ ಸಂಖ್ಯೆ. ಕೆಇಪಿಜಿಟಿ/ಕೆಸಿಒ123/ಪಿ14/2015-16/ಸಿವೈಎಸ್-54 ದಿನಾಂಕ 16.12.2015.
6. ಸರ್ಕಾರದ ಇಂಧನ ಇಲಾಖೆ/ಆರ್ಥಿಕ ಇಲಾಖೆಯ ಪತ್ರ (ಇ-ಮೇಲ್) ದಿನಾಂಕ 08.01.2016.

*******

1. ಉಲ್ಲೇಖ-4ರ ಪತ್ರದಲ್ಲಿ ಸರ್ಕಾರ ಕೋರಿರುವಂತೆ, **31.05.2002 ರಲ್ಲಿದ್ದಂತೆ ಸಿಬ್ಬಂದಿ/ಅಧಿಕಾರಿಗಳ ವಿವರಗಳನ್ನು ಅನುಬಂಧ-1ರಲ್ಲಿ, ಪಿಂಚಣಿದಾರರ ವಿವರಗಳನ್ನು ಅನುಬಂಧ-2ರಲ್ಲಿ ಹಾಗೂ ಕುಟುಂಬ ಪಿಂಚಣಿದಾರರ ವಿವರಗಳನ್ನು ಅನುಬಂಧ-3 ರಲ್ಲಿ <u>Excel ನಮೂನೆಯಲ್ಲಿ</u>** ಕವಿಪ್ರನಿನಿ/ವಿಸಕಂಗಳ ಎಲ್ಲಾ ಲೆಕ್ಕ ಘಟಕಗಳಿಂದ ಪಡೆದು ಕ್ರೋಢೀಕರಿಸಿ, ದಿನಾಂಕ 31.12.2015ರೊಳಗೆ ಸೂಕ್ತ ಕ್ರಮಕ್ಕೆ ಟ್ರಸ್ಟ್‌ಗೆ ಕಳುಹಿಸುವ ವ್ಯವಸ್ಥೆ ಮಾಡುವಂತೆ ಉಲ್ಲೇಖ-5ರ ಪತ್ರದಲ್ಲಿ ಕೋರಲಾಗಿರುತ್ತದೆ.

2. ಮುಂದುವರೆದು, ದಿನಾಂಕ 08.01.2016ರಂದು ನಡೆದ ಸಭೆಯಲ್ಲಿ ಕರ್ನಾಟಕ ಸರ್ಕಾರದ ಆರ್ಥಿಕ ಇಲಾಖೆಯು ಇತರ ಹೆಚ್ಚಿನ ವಿವರ ನೀಡಲು ತಿಳಿಸಿರುವ ಹಿನ್ನೆಲೆಯಲ್ಲಿ, ಉಲ್ಲೇಖ-6ರ ಸರ್ಕಾರದ ಪತ್ರದಲ್ಲಿ ದಿನಾಂಕ 31.05.2002ರಲ್ಲಿದ್ದಂತೆ ಸಿಬ್ಬಂದಿ/ಅಧಿಕಾರಿಗಳ ಖಾತೆಯಲ್ಲಿ ಜಮೆ ಇರುವ ಗಳಿಕೆ ರಜೆಯ ವಿವರ, 31.05.2002ರವರೆಗಿನ ಸೇವಾವಧಿಯ ಆಧಾರದ ಮೇಲೆ ಲಭ್ಯವಾಗಬಹುದಾದ ಪಿಂಚಣಿ/ಕುಟುಂಬ ಪಿಂಚಣಿ, ಉಪದಾನ ಮತ್ತು ಪರಿವರ್ತಿತ ಪಿಂಚಣಿ ಇವುಗಳ ಹೆಚ್ಚುವರಿ ಮಾಹಿತಿಗಳನ್ನು ಒದಗಿಸುವಂತೆ ಕೋರಿರುವ ಕಾರಣ, <u>ಅನುಬಂಧ-1ರ ನಮೂನೆಯನ್ನು ಪರಿಷ್ಕರಿಸಿ ಈ ಪತ್ರಕ್ಕೆ ಲಗತ್ತಿಸಲಾಗಿದೆ.</u>

3. ಅನುಬಂಧ-1ರ ವಿವರಣಾ ಪಟ್ಟಿಯ ಸಂಕಲನ ಕಾರ್ಯಕ್ಕೆ ಅನುಕೂಲವಾಗುವ ದೃಷ್ಟಿಯಿಂದ 31.05.2002ರಲ್ಲಿದ್ದಂತಹ ಕವಿಪ್ರನಿನಿ ಗ್ರೂಪ್-ಎ & ಬಿ ಅಧಿಕಾರಿಗಳ ವಿವರಗಳನ್ನು ಕವಿಪ್ರನಿನಿ ವೆಬ್ ತಾಣದಲ್ಲಿ ಪ್ರಕಟಿಸಲಾಗಿರುತ್ತದೆ. <u>(www.kptcl.com>e-prasarana>Administrative matters>KPTCL & ESCOMs Pension & Gratuity Trust>7.Officers details as at 31.05.2002)</u>

4. 31.05.2002ರಲ್ಲಿದ್ದಂತಹ ಗ್ರೂಪ್ ಸಿ & ಡಿ ನೌಕರರ ವಿವರಗಳನ್ನು ಸಹ Scale Register/ಇತರ ದಾಖಲೆ ಪುಸ್ತಕದ ಆಧಾರದ ಮೇಲೆ ಪರಿಷ್ಕತ ಅನುಬಂಧ-1ರ ನಮೂನೆಯಲ್ಲಿ ನೀಡುವುದು.

5. ಉಲ್ಲೇಖ-5ರ ಪತ್ರದಲ್ಲಿ, ನಿಗದಿಪಡಿಸಿದ ಅನುಬಂಧ-2 & 3ರ ವಿವರಣಾ ಪಟ್ಟಿಗಳಲ್ಲಿ ಯಾವುದೇ ಬದಲಾವಣೆಗಳಿರುವುದಿಲ್ಲ.

6. ಸರ್ಕಾರದಿಂದ ಪಿಂಚಣಿ ಮತ್ತು ಉಪದಾನ ವಂತಿಗೆ ಬಾಕಿ ಬಿಡುಗಡೆಗೆ ಸಂಬಂಧಿಸಿದಂತೆ, ಪರಿಸ್ಥಿತಿಯ ಗಂಭೀರತೆಯನ್ನು ಪರಿಗಣಿಸಿ, ಪಿಂಚಣಿ ಮತ್ತು ಉಪದಾನ ಟ್ರಸ್ಟ್‌ನ ಆರ್ಥಿಕತೆಯನ್ನು ಸಬಲಗೊಳಿಸುವ ಧ್ಯೇಯೋದ್ದೇಶಗಳನ್ನು ಈಡೇರಿಸುವ ನಿಟ್ಟಿನಲ್ಲಿ ಸೃಜನಾತ್ಮಕ ಕಾರ್ಯ ಪ್ರವೃತ್ತಗೊಳಿಸಲು ಹಾಗೂ ನಿವೃತ್ತಗೊಳ್ಳುವ ಸಿಬ್ಬಂದಿ/ಪಿಂಚಣಿದಾರರ/ಕುಟುಂಬ ಪಿಂಚಣಿದಾರರ ಹಿತಾಸಕ್ತಿ ಕಾಪಾಡುವ ದೃಷ್ಟಿಯಿಂದ ಸರ್ಕಾರ ಕೋರಿರುವ ಮಾಹಿತಿಯನ್ನು **ಪರಿಷ್ಕೃತ ಅನುಬಂಧ-1, ಮತ್ತು ಈಗಾಗಲೇ ತಿಳಿಸಿರುವ ಅನುಬಂಧ-2 ಮತ್ತು 3ಗಳನ್ನು** ಆದ್ಯತೆ ಮೇರೆಗೆ ಲೆಕ್ಕ ಘಟಕಗಳಿಂದ ಪಡೆದು ಕ್ರೋಢೀಕರಿಸಿ **Excel ನಮೂನೆಯಲ್ಲಿ ದಿನಾಂಕ 22.01.2016ರೊಳಗೆ ಸೂಕ್ತ ಕ್ರಮಕ್ಕೆ ಟ್ರಸ್ಟ್‌ಗೆ ಕಳುಹಿಸುವ ವ್ಯವಸ್ಥೆ ಮಾಡುವಂತೆ ಈ ಮೂಲಕ ಸೂಚಿಸಲಾಗಿದೆ.**

7. ಕೋರಿರುವ ಮಾಹಿತಿಗಳನ್ನು ಒದಗಿಸುವಲ್ಲಿ ವಿಳಂಬವಾದಲ್ಲಿ ಸಂಬಂಧಿಸಿದ ಅಧಿಕಾರಿಗಳನ್ನೇ ನೇರ ಹೊಣೆಗಾರರನ್ನಾಗಿ ಮಾಡಲಾಗುವುದೆಂದು ನಿಮ್ಮ ವ್ಯಾಪ್ತಿಯ ಅಧಿಕಾರಿಗಳಿಗೆ ಸೂಚಿಸಲು ತಿಳಿಸಲಾಗಿದೆ.

ತಮ್ಮ ವಿಶ್ವಾಸಿ,

ನಿರ್ದೇಶಕರು(ಹಣಕಾಸು), ಕವಿಪ್ರನಿನಿ &
ಅಧ್ಯಕ್ಷರು ಪಿಂಚಣಿ & ಉಪದಾನ ಟ್ರಸ್ಟ್,

ಪ್ರತಿಗಳು ಮಾಹಿತಿಗಾಗಿ:

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಕರ್ನಾಟಕ ಸರ್ಕಾರ, ಇಂಧನ ಇಲಾಖೆ ರವರ ಆಪ್ತ ಕಾರ್ಯದರ್ಶಿ.
2. ವ್ಯವಸ್ಥಾಪಕ ನಿರ್ದೇಶಕರು, ಕವಿಪ್ರನಿನಿ ರವರ ಆಪ್ತ ಕಾರ್ಯದರ್ಶಿ.
3. ನಿರ್ದೇಶಕರು(ಆ & ಮಾಸಂ), ಕವಿಪ್ರನಿನಿ ರವರ ಆಪ್ತ ಕಾರ್ಯದರ್ಶಿ.
4. ಆರ್ಥಿಕ ಸಲಹೆಗಾರರು(ಲೆ & ಸಂ), ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
5. ಉಪಕಾರ್ಯದರ್ಶಿ (ಆಯವ್ಯಯ & ಸಂಪನ್ಮೂಲ), ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.
6. ನಿರ್ದೇಶಕರು (ಹಣಕಾಸು), ಬೆವಿಕಂ, ಬೆಂಗಳೂರು ರವರ ಆಪ್ತ ಕಾರ್ಯದರ್ಶಿ.
7. ವಿಶೇಷಾಧಿಕಾರಿ, ಇಂಧನ ಇಲಾಖೆ, ವಿಕಾಸ ಸೌಧ, ಬೆಂಗಳೂರು.
8. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ನೌಕರರ ಸಂಘ (ನೊ. ಸಂಖ್ಯೆ.659) ಮತ್ತು ಟ್ರಸ್ಟೀ.
9. ಪ್ರಧಾನ ಕಾರ್ಯದರ್ಶಿ, ಕವಿಮಂ ಇಂಜಿನಿಯರುಗಳ ಸಂಘ ಮತ್ತು ಟ್ರಸ್ಟೀ.
10. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ ಲೆಕ್ಕಾಧಿಕಾರಿಗಳ ಸಂಘ ಮತ್ತು ಟ್ರಸ್ಟೀ.
11. ಪ್ರಧಾನ ಕಾರ್ಯದರ್ಶಿ, ಕವಿಮಂ ಪ.ಜಾ/ಪ.ವ. ಕಲ್ಯಾಣ ಸಂಘ ಮತ್ತು ಟ್ರಸ್ಟೀ

.............................................................. ELECTRICITY SUPPLY COMPANY LIMITED/KPTCL

**ANNEXURE-1**

## Service details of Officers/employees appointed before 01.06.2002

| Sl No. | Company | Zone | Circle | Division | Name of the Employee/ Officer | Designation as on 31.5.2002 | Group (A, B, C, D) | Date of Birth (dd/mmm/yyyy) | Date of entry into regular service (dd/mmm/yyyy) | Date of Retirement (dd/mmm/yyyy) | Qualifying service as at 31.05.2002 | | Pay as at 31.05.2002 | No. of Earned Leave as on 31.05.2002 in their account | Based on information given in column Nos. 9,10,11,12 & 13 | | | | Encashment of EL surrender as on the date of retirement |
|---|---|---|---|---|---|---|---|---|---|---|---|---|---|---|---|---|---|---|---|
| | | | | | | | | | | | Years | Months | Basic pay | | Amount of Pension | Amount of family pension | Amount of Gratuity | Amount of Commutation | |
| | 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 | 16 | 17 | 18 | 19 |
| | | | | | | | | | | | | | | | | | | | |
| | | | | | | | | | | | | | | | | | | | |
| | | | | | | | | | | | | | | | | | | | |
| | | | | | | | | | | | | | | | | | | | |
| | | | | | | | | | | | | | | | | | | | |
| | | | | | | | | | | | | | | | | | | | |